# ಬಾಲ್ಯದಲ್ಲೇ ಬಣ್ಣದ ಮೋಹ ಹುಟ್ಟಿತ್ತು

## ಯದುಶ್ರೇಷ್ಠ
ಉದಯದ 'ಅಣ್ಣ ತಂಗಿ'ಯ ಅಭಿ

◆ **ನಿಮ್ಮ ಪರಿಚಯವನ್ನು ಮಾಡಿಕೊಡಿ.**

ಊರು ಮೈಸೂರು. ಓದಿದ್ದು ಎಲೆಕ್ಟ್ರಿಕಲ್ ಎಂಜಿನಿಯರಿಂಗ್. ರಂಗಭೂಮಿಯಲ್ಲಿ ಅಭ್ಯಾಸ ಮಾಡುತ್ತಿದ್ದೆ. ಕೋಲ್ಕತ್ತಾದ ಒಂದು ರಂಗ ತಂಡದಲ್ಲಿ ಸ್ವಲ್ಪ ದಿನ ಕೆಲಸ ಮಾಡಿದೆ. ಅಲ್ಲಿ ಅಭಿನಯದ ಜೊತೆ ನಿರ್ದೇಶನವನ್ನೂ ಮಾಡ್ತಾ ಇದ್ದೆ. ಓದುವಾಗಲೇ ಸ್ನೇಹಿತರೊಟ್ಟಿಗೆ ಸೇರಿ ಆರು ಕಿರುಚಿತ್ರಗಳನ್ನು ಮಾಡಿದ್ದೆವು. ರಾಧಿಕಾ ಚೇತನ್ ಜೊತೆ ಸಿನಿಮಾ ಮಾಡಿದ್ದೆ. 'ಥಿಯರಿ' ಎಂಬ ಸಿನಿಮಾದಲ್ಲಿ ಮುಖ್ಯ ಪಾತ್ರ ನಿರ್ವಹಿಸಿದ್ದೆ. ಕಿರುತೆರೆಗೆ 'ಮಿಥುನರಾಶಿ' ಮೂಲಕ ಬಂದೆ. 'ಜೇನುಗೂಡು' ನಂತರ 'ಅಣ್ಣ ತಂಗಿ' ಮಾಡುತ್ತಿದ್ದೇನೆ.

◆ **ನಟನೆಯ ಹವ್ಯಾಸ ಬೆಳೆದಿದ್ದು ಹೇಗೆ?**

ನಮ್ಮ ಮನೆಯಲ್ಲಿ ಕಲೆಯ ವಾತಾವರಣ ಹೆಚ್ಚಿದೆ. ನನಗೆ ತಬಲಾ ನುಡಿಸಲು ಬರುತ್ತದೆ. ಹಾಡು ಹೇಳಲು ಬರುತ್ತದೆ. ನನ್ನ ಅಕ್ಕ ಸಂಗೀತ ಪಾಠ ಮಾಡುತ್ತಾಳೆ. ತಾಯಿ ಕೂಡ ಗಾಯಕಿ. ಶಾಲಾ ದಿನಗಳಲ್ಲಿಯೇ ನಾಟಕವನ್ನು ಮಾಡಲು ಶುರುಮಾಡಿದೆ. ಹತ್ತನೇ ತರಗತಿಗೆ ಬರುವ ಹೊತ್ತಿಗೆ ರಂಗ ಎನ್ನುವುದು ಪ್ಯಾಶನ್ ಆಯಿತು. ಶಾರದಾ ವಿಲಾಸ ಕಾಲೇಜಿನ ಪ್ರಾಂಶುಪಾಲರಾದ ಎಚ್.ಎಸ್. ಉಮೇಶ್ ರಂಗ ನಿರ್ದೇಶಕರೂ ಹೌದು. ಅವರ ನಿರ್ದೇಶನದಲ್ಲಿ ಹಲವು ನಾಟಕ ಆಡಿದ್ದೇನೆ. ನಟ ರೇಣುಕಾ ಪ್ರಸಾದ್ ಅವರ ಜೊತೆ ಕೂಡ ನಾಟಕ ಮಾಡಿದೆ. ಮೈಸೂರಿನ ಸಮುದಾಯ ತಂಡದ ಜೊತೆಗೂ ಮುನ್ನಡೆದೆ. ಇದರಿಂದ ರಂಗ ಚಟುವಟಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಲು ಸಾಧ್ಯ ಆಯಿತು. 'ಯಮಳ ಪ್ರಶ್ನೆ' ಪೂರ್ಣಚಂದ್ರ ತೇಜಸ್ವಿ ಅವರ ನಾಟಕ. ಅದನ್ನು ರಂಗಾಯಣಕ್ಕೆ ನಾನೇ ನಿರ್ದೇಶನ ಮಾಡಿದೆ.

ಬೆಂಗಳೂರಿಗೆ ಕೆಲಸಕ್ಕೆ ಅಂತ ಬಂದೆ. ಇಲ್ಲಿಗೆ ಬಂದ ನಂತರ ರಂಗಭೂಮಿ ಸಂಪರ್ಕ ಕಡಿಮೆ ಆಯಿತು. ಸಿನಿಮಾದಲ್ಲಿ ಯಶಸ್ಸೂ ಕಾಣಲಿಲ್ಲ. ಕುಟುಂಬದ ಜವಾಬ್ದಾರಿ ಇರುವುದರಿಂದ ಕೆಲಸ ಅನಿವಾರ್ಯ ಆಯಿತು. ದೆಹಲಿಗೆ ತರಬೇತಿ ಸಂಬಂಧ ಹೋಗಿದ್ದೆ. ಅಲ್ಲಿ ನಾನು ಕೆಲಸ ಮಾಡುತ್ತಿದ್ದ ಬಿಲ್ಡಿಂಗ್ ಪಕ್ಕದಲ್ಲಿಯೇ ರಾಷ್ಟ್ರೀಯ ನಾಟಕ ಶಾಲೆ (ಎನ್‌ಎಸ್‌ಡಿ) ಅದನ್ನು ನೋಡಿದಾಗೆಲ್ಲ ನಾನು ಇರಬೇಕಾಗಿದ್ದು ಇಲ್ಲಲ್ಲ ಅಲ್ಲಿ ಎಂದು ಅನಿಸುತ್ತಿತ್ತು. ಬೆಂಗಳೂರಿಗೆ ಬಂದ ಮೇಲೆ 'ಮಿಥುನರಾಶಿ' ಆಡಿಷನ್‌ಗೆ ಕರೆದಿದ್ದರು. ನಾನೂ ಹೋಗಿದ್ದೆ. ಅವಕಾಶ ಸಿಕ್ಕಿತು. ಅದರ ಮೂಲಕ ಬರಹ ಮತ್ತು ನಿರ್ದೇಶನದ ಕಡೆಯೂ ಗಮನ ಕೊಡಲು ಸಾಧ್ಯ ಆಯಿತು 'ಶಾಂತಂಪಾಪಂ'ಗೆ ಸ್ಕ್ರಿಪ್ಟ್ ಬರೀತಾ ಇದ್ದೆ.

◆ **ನಿಮಗಿರುವ ಕನಸು, ಗುರಿಗಳೇನು?**

ಜೀವನದ ಅಗತ್ಯತೆ ತುಂಬ ಕಲಿಸಿದೆ. ನನಗೆ ಕಥೆ ಹೇಳುವ ಆಸೆ. ನಟನೆ ನಿಲ್ಲಿಸಿದರೆ, ಕಥೆ ಹೇಳಬಲ್ಲೆ. ನಾನು ನಟನೆಯನ್ನು ಯಾವತ್ತೂ ನಿಲ್ಲಿಸುವುದಿಲ್ಲ. ವಾಸ್ತವವನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಕಥೆ ಹೇಳಬೇಕು ಜನರನ್ನು ರಂಜಿಸಬೇಕು ಎನ್ನುವುದು ನನ್ನ ಉದ್ದೇಶ. ನನ್ನ ಕಥೆ ನೋಡುವವರು ತಮ್ಮ ನೋವು ಮರೆಯಬೇಕು. ಅವರಿಗೆ ಮುದ ಅನಿಸಬೇಕು. ಅವರಲ್ಲಿ ಭಾವನೆಗಳನ್ನು ಸೃಜಿಸಬೇಕು. ಅದಕ್ಕೆ ದೃಶ್ಯ ಮಾಧ್ಯಮ ಒಂದು ವೇದಿಕೆ ಆಗುತ್ತದೆ.



◆ **ಅಭಿ ಪಾತ್ರಕ್ಕೆ ಯದು ಎಷ್ಟು ಅನಿವಾರ್ಯ ಆಗುತ್ತಾರೆ?**

ಪಾತ್ರಕ್ಕೆ ಯದು ಅಷ್ಟು ಪೂರಕವಾಗಿಲ್ಲ. ಅಭಿದು ಉತ್ಪ್ರೇಕ್ಷೆಯ ವ್ಯಕ್ತಿತ್ವ. ನಾನು ಗುರಿ ಮುಟ್ಟಲು ಒಂದೇ ದಾರಿ ಎಂದು ನಂಬುವುದಿಲ್ಲ. ಅಭಿಗೆ ಒಂದೇ ಹಟ, ಅದು ತಪ್ಪು ಅಂತ ಅಲ್ಲ. ಅಂತಹ ವ್ಯಕ್ತಿತ್ವಗಳು ಇರುವುದೂ ಸುಳ್ಳಲ್ಲ. ಈ ಧಾರಾವಾಹಿ ತಮಿಳಿನ ಅವತರಣಿಕೆ. ಅಲ್ಲಿ ಅಣ್ಣ–ತಂಗಿ ಇಬ್ಬರೂ ಇಷ್ಟ ಇಲ್ಲದವರನ್ನು ಮದುವೆ ಆಗುತ್ತಾರೆ. ಇಲ್ಲಿಯೂ ಹಾಗೆ ಆಗುತ್ತದೆ. ಸಾಮಾನ್ಯವಾಗಿ ನಾಯಕನಿಗೆ ನಾಯಕಿ ಸಿಗಲಿಲ್ಲ ಅಂದರೆ ಕಥೆ ಮುಗಿಯುತ್ತದೆ. ಆದರೆ ಇಲ್ಲಿ ಆರಂಭವಾಗುತ್ತದೆ. ಪಾತ್ರ ಶೋಧಕ್ಕೆ ಸಿದ್ಧವಾಗಿದೆ. ಇದೊಂದು ರೀತಿ ಚೆನ್ನಾಗಿದೆ.

ಅಭಿ ಸಾಮಾನ್ಯೀಕರಣ ಮಾಡಲು ಆಗುವುದಿಲ್ಲ. ಅಭಿ ಪಾತ್ರ ತುಂಬ ಚೆನ್ನಾಗಿದೆ. ಆತ ತನ್ನ ಪ್ರೀತಿ ಉಳಿಸಿಕೊಳ್ಳಲು ಏನೂ ಬೇಕಾದರೂ ಮಾಡಲು ಸಿದ್ಧ. ಅವನ ಪ್ರೇಯಸಿಯ ಮದುವೆಗೆ ಯುವತಿಯ ವೇಷದಲ್ಲಿ ಹೋಗುತ್ತಾನೆ. ಪಾತ್ರಕ್ಕೆ ವಿಶಾಲ ಹರವಿದೆ. ಪ್ರೀತಿ ಅಂದ ತಕ್ಷಣ ಅಂಧತ್ವ ಆವರಿಸುತ್ತದೆ. ನಟಿಸಲು ತುಂಬ ಅವಕಾಶ ಇದೆ. ಪಾತ್ರ ಹೇಳಬೇಕಾಗಿದ್ದನ್ನು ತಕ್ಷಣ ಹೇಳುವುದಿಲ್ಲ. ತುಂಬ ಸಂಗತಿಯನ್ನು ಸಂವಹನ ಮಾಡುತ್ತದೆ. ಇದ್ದಕ್ಕಿದ್ದಂತೆ ಉಗ್ರ ರೂಪ ಪಡೆಯುತ್ತದೆ. ಇಂತಹ ವೈವಿಧ್ಯದ ಪಾತ್ರವನ್ನು ಅನುಭವಿಸುತ್ತಿದ್ದೇನೆ.

◆ **ಎಂಜಿನಿಯರ್ ಉದ್ಯೋಗ ಬಿಟ್ಟು ಅನಿಶ್ಚಿತ ವೃತ್ತಿಯ ಮೇಲೆ ಭರವಸೆ ಬಂದಿದ್ದು ಹೇಗೆ?**

ಲೆಕ್ಕಾಚಾರದ ಮನೋಭಾವ ನನ್ನಲ್ಲಿ ಬೆಳೆಯುವ ಮೊದಲೇ ನಾನು ನಟನೆಯನ್ನೇ ವೃತ್ತಿಯಾಗಿ ಮಾಡಿಕೊಳ್ಳಬೇಕು ಎಂದು ನಿರ್ಣಯಿಸಿದ್ದೆ. ಇದು ಇಷ್ಟದ ಕೆಲಸವಾಗಿತ್ತು. ಮೂರನೇ ತರಗತಿಯಲ್ಲೇ ತಬಲಾ ಕಲಿಕೆ ಶುರುಮಾಡಿದ್ದೆ. ರಂಗಭೂಮಿಗೆ ಒತ್ತಾಯದಿಂದ ಹೋದವನಲ್ಲ. ನಾನು ಒಂದನೇ ತರಗತಿಯಲ್ಲಿ ಇದ್ದಾಗ ಹಿರಿಯ ವಿದ್ಯಾರ್ಥಿಗಳು ನನ್ನನ್ನು ಕರೆದುಕೊಂಡು ಹೋಗಿ ತಮ್ಮ ನಾಟಕದಲ್ಲಿ ಒಂದು ಪಾತ್ರ ಮಾಡಿಸಿದ್ದರು. ತೂಕದ ಬ್ಯಾಗ್ ಹೊತ್ತು ಹೋಗುವ ಮಗುವಿನ ಪಾತ್ರ ಅದು. ಇದನ್ನೇ ಮಾಡಬೇಕು ಎಂಬ ಸ್ಪಷ್ಟತೆ ನನಗಿದೆ. ಇಲ್ಲಿ ಎಂತಹ ಸೋಲು ಬಂದರೂ ಅದಕ್ಕಿಂತ ದೊಡ್ಡ ಸೋಲನ್ನು ಎದುರಿಸಲು ಸಿದ್ಧನಾಗಿದ್ದೇನೆ. ಸೋಲಿಗೆ ಅಂಜುವುದಿಲ್ಲ. ನನಗೆ ನಾನೇ ಸಮಾಧಾನ ಮಾಡಿಕೊಳ್ಳುವ ಮನೋಸ್ಥಿತಿಯಲ್ಲಿ ಸಾಗುತ್ತಿದ್ದೇನೆ.

■ **ರಾಘವೇಂದ್ರ ಕೆ.**